SRI JAYACHAMARAJA CREDIT
CO-OPERATIVE SOCIETY LTD.
No.21/1, Sri Lakshmi Venkataswara Temple Street,
Matadahalli, BANGALORE - 560 032.
Phone No : 23335269

# 2023-24 ನೇ ಸಾಲಿನ 50 ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ನಡವಳಿಕೆಗಳು:

Sri Jayachamaraja Cr. Co-op. Society Ltd. Bangalore 32

ದಿನಾಂಕ : 25.08.2024 ರ ಭಾನುವಾರ ಬೆಳಿಗ್ಗೆ 10:00 ಘಂಟೆಗೆ, ಬಿ.ಟಿ. ನಗರ ಅಂಚೆ, ಮಠದಹಳ್ಳಿಯಲ್ಲಿರುವ 'ಶ್ರೀ ಲಕ್ಷ್ಮೀವೆಂಕಟೇಶ್ವರ ಕಲ್ಯಾಣ ಮಂಟಪ', ಬೆಂಗಳೂರು - 32. ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರೇಗೌಡ ರವರ ಅಧ್ಯಕ್ಷತೆಯಲ್ಲಿ ಮಹಾಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ : 888

ನಿರ್ದೇಶಕರಾದ ಶ್ರೀ ಗಜೇಂದ್ರ. ಬಿ. ಆರ್. ರವರು ಮಹಾಸಭೆಯ ಸೂಚನೆಯನ್ನು ಓದಿ ದಾಖಲು ಮಾಡಿದರು.

1. ಕುಮಾರಿ ಲಿಖಿತಾ. ಟಿ. ರವರ ಪ್ರಾರ್ಥನೆಯೊಂದಿಗೆ ಜ್ಯೋತಿ ಬೆಳಗಿಸುವ ಮೂಲಕ ಮಹಾಸಭೆಯ ಕಾರ್ಯಕಲಾಪಗಳನ್ನು ಕೈಕೊಂಡಂತೆ ಮುಂದುವರಿಸಲಾಯಿತು.

2. ಅಧ್ಯಕ್ಷರಾದ ಶ್ರೀ ಚಂದ್ರೇಗೌಡ ರವರು ಸ್ವಾಗತಭಾಷಣ ಮಾಡಿದರು.

3. ದೈವಾಧೀನರಾದ ಸದಸ್ಯರುಗಳಿಗೆ ಶ್ರದ್ಧಾಂಜಲಿ :

2023-24 ನೇ ಸಾಲಿನಲ್ಲಿ ದೈವಾಧೀನರಾಗಿದ್ದ 29 ಸದಸ್ಯರುಗಳ ಹೆಸರುಗಳನ್ನು ನಿರ್ದೇಶಕರಾದ ಶ್ರೀಮತಿ ಮಾಲಾ ಬಾಬುರೆಡ್ಡಿ ರವರು ಮಹಾಸಭೆಯಲ್ಲಿ ಓದುವ ಮೂಲಕ, ಸಭೆಯು ಎರಡು ನಿಮಿಷಗಳ ಮೌನ ಆಚರಣೆ ಶ್ರದ್ಧಾಂಜಲಿ ಸಲ್ಲಿಸಿದ ತರುವಾಯ

Created with cam scan

Co-op. Society Ltd. Bangalore-32

ಕಾರ್ಯಕಲಾಪಗಳನ್ನು ಮುಂದುವರಿಸಲಾಯಿತು.

4. 2023-24ನೇ ಸಾಲಿನ ಆಡಳಿತ ಮಂಡಳಿ ವರದಿ ಮಂಡನೆ ಮತ್ತು ಅನುಮೋದನೆ:

ಸಂಘದ 2023-24ನೇ ಸಾಲಿನ ಆಡಳಿತ ಮಂಡಳಿ ವರದಿಯಲ್ಲಿ ಪುಟಸಂಖ್ಯೆ 9-12 ರಲ್ಲಿ ನಮೂದಿಸಿದ್ದ ವಾರ್ಷಿಕ ವರದಿಯ ವಿವರಗಳನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಮಹಾಸಭೆಯಲ್ಲಿ ಓದಿ ಮಂಡಿಸಿ ಅನುಮೋದನೆಯನ್ನು ಕೋರಿದರು. ವರದಿಯನ್ನು ಸಭೆಯು ಚರ್ಚಿಸಲಾಗಿ, ಸದಸ್ಯರಾದ ಶ್ರೀ. ನಾಗರಾಜ್ ಜಂ.ಸಂ. 2431 ರವರು ಸೂಚಿಸಿ, ಶ್ರೀ. ವೆಂಕಟೇಶ.ಟಿ. ಜಂ.ಸಂ.1310 ರವರು ಅನುಮೋದಿಸಿದರು.

5. 2023-24ನೇ ಸಾಲಿನ ಲೆಕ್ಕ-ಪರಿಶೋಧನಾ ವರದಿ, ಅನುಪಾಲನಾ ವರದಿ, ಹಾಗೂ ಲೆಕ್ಕ-ಪತ್ರಗಳ ಮಂಡನೆ ಮತ್ತು ಅನುಮೋದನೆ:

2023-24ನೇ ಸಾಲಿನ ಲೆಕ್ಕ-ಪರಿಶೋಧನಾ ವರದಿಯನ್ನು ವಾರ್ಷಿಕ ವರದಿ ಪುಟಸಂಖ್ಯೆ 43-91 ವರೆಗಿನ ಸಂಪೂರ್ಣ ವರದಿ, ಲೆಕ್ಕ ಪರಿಶೋಧನಾ ವರದಿಯಲ್ಲಿನ ನ್ಯೂನತೆಗಳಿಗೆ ಅನುಪಾಲನಾ ವರದಿ ಪುಟಸಂಖ್ಯೆ 13-14 ರಲ್ಲಿದ್ದಂತೆ, ಮು.ಕಾ.ನಿ.ಯವರು ಸ-ವಿಸ್ತಾರವಾಗಿ ಓದಿ, ಚರ್ಚಿಸಿದ ನಂತರ ವರದಿ ಪುಟಸಂಖ್ಯೆ 20-33 ರಲ್ಲಿ ನೀಡಲಾಗಿದ್ದ ಲೆಕ್ಕ-ಪತ್ರಗಳನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆ ಕೋರಿದರು. ಸದಸ್ಯರಾದ ಶ್ರೀ. ಬಸವರಾಜು.ಪಿ. ಜಂ.ಸಂ.1071 ಮತ್ತು ಶ್ರೀ. ಸುರೇಶ್.ಕೆ. ಜಂ.ಸಂ.11122 ರವರುಗಳು ಸೂಚಿಸಿ, ಶ್ರೀ. ವೆಂಕಟೇಶಮೂರ್ತಿ.ಪಿ.ವಿ. ಜಂ.ಸಂ. 784 ರವರು ಅನುಮೋದಿಸಿದರು. ಸದಸ್ಯರು ಕೈ-ಎತ್ತುವ ಮೂಲಕ ಅನುಮೋದನೆಯನ್ನು ನೀಡಿದರು.

Created with cam scan

Sri Jayachamaraja Cr. Co-op. Society Ltd. Bangalore-32



6. 2023-24ನೇ ಸಾಲಿನ ನಿವ್ವಳಲಾಭ ವಿಲೇವಾರಿ ಮಂಡನೆ ಮತ್ತು ಅನುಮೋದನೆ :

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಸಂಘವು 2023-24ನೇ ಸಾಲಿನಲ್ಲಿ ಗಳಿಸಿದ್ದ ನಿವ್ವಳಲಾಭ ರೂ 1,20,68,223/- ಗಳನ್ನು ಕಾಯ್ದೆ ಕಲಂ 57, ನಿಯಮ 22, ಹಾಗೂ ಸಂಘದ ಉಪನಿಬಂಧನೆ 76 ರಂತೆ, ಈ ಕೆಳಕಂಡಂತೆ ವಿಲೇವಾರಿಗೆ ಮಂಡಿಸಿ ಸಭೆಯ ಅನುಮೋದನೆಯನ್ನು ಕೋರಿದರು. ನಿವ್ವಳಲಾಭ ವಿಲೇವಾರಿ 3:ಕ್ಕೆ ವರದಿ ಪುಟ ಸಂಖ್ಯೆ 11 ರಲ್ಲಿದ್ದಂತೆ, ಸದಸ್ಯರಾದ ಶ್ರೀ. ನರಸಿಂಹಮೂರ್ತಿ ಜಂ.ಸಂ. 1449 ರವರು ಸೂಚಿಸಿ, ಶ್ರೀ. ಕೃಷ್ಣಮೂರ್ತಿ ಜಂ.ಸಂ. 1406 ರವರು ಅನುಮೋದಿಸಿದರು.

| ಕ್ರ.ಸಂ. | ವಿವರಗಳು | ಶೇಕಡಾ. | ಮೊತ್ತ. ರೂ. |
|---|---|---|---|
| 1. | ಆಪದ್ಧನ ನಿಧಿ | 25 | 30,17,056 -00 |
| 2. | ಸಹಕಾರ ಶಿಕ್ಷಣ ನಿಧಿ | 2 | 1,81,023 -00 |
| 3. | ಕಟ್ಟಡ ನಿಧಿ | 20 | 17,74,029 -00 |
| 4. | ಕರಡು ಸಾಲದ ನಿಧಿ | 2 | 141922 -00 |
| 5 | ಸುವರ್ಣ ಮಹೋತ್ಸವ ನಿಧಿ | 10 | 6,95,419 -00 |
| 6. | ಮರಣ ಪರಿಹಾರ ನಿಧಿ | 2 | 1,25,175 -00 |
| 7 | ಪ್ರತಿಭಾ ಪುರಸ್ಕಾರ ನಿಧಿ | 2 | 122,672 -00 |
| 8. | ದಾನ ಧರ್ಮದ ನಿಧಿ | 1 | 60,109 -00 |
| 9. | ಲಾಭಾಂಶ ಸಮತೋಲನಾ ನಿಧಿ | 1 | 59508 -00 |

Created with cam scan

| | | | |
|---|---|---|---|
| 10. | ಸಿಬ್ಬಂದಿ ಬೋನಸ್ | 45 ದಿನಗಳ ಮೂಲ ವೇತನ. | 3,83,700-00 |
| 11. | ಸದಸ್ಯರ ಷೇರು ಡಿವಿಡೆಂಡ್ | 22 | 55,07,610-00 |
| | | ಒಟ್ಟು | 1,20,68,223-00 |

## 7. 2024-25ನೇ ಸಾಲಿನ ಆಯ-ವ್ಯಯ ಪಟ್ಟಿ ಮಂಡನೆ ಮತ್ತು ಅನುಮೋದನೆ :

ಸಂಘದ 2024-25ನೇ ಸಾಲಿನ ಆಯ-ವ್ಯಯ ಪಟ್ಟಿಯು ಕ:ಪ್ರತಿಯನ್ನು ವಾರ್ಷಿಕ ವರದಿ ಪುಟ ಸಂಖ್ಯೆ -12 ರಲ್ಲಿ ಬಿಂಬಿಸಿದ್ದಂತೆ, ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಕೋರಿದರು. ಸದಸ್ಯರಾದ ಶ್ರೀಮತಿ. ಬಿ.ಎಸ್. ಗೌರಮ್ಮ ಜಂ.ಸಂ. 2486 ರವರು ಸೂಚಿಸಿ, ಶ್ರೀ. ನಾಗಭೂಷಣ. ಜಂ.ಸಂ. 10608 ರವರು ಅನುಮೋದಿಸಿದರು.

(ಮೊತ್ತ ಲಕ್ಷರೂಗಳಲ್ಲಿ)

| ಕ್ರ.ಸಂ. | ಲೆಕ್ಕ ಶೀರ್ಷಿಕೆ | 2023-24ನೇ ಸಾಲಿಗೆ ಅಂದಾಜು ಪಟ್ಟಿ | 2023-24ನೇ ಸಾಲಿನಲ್ಲಿ ಆದ ವಾಸ್ತವಿಕ ಖರ್ಚು | 2024-25ನೇ ಸಾಲಿಗೆ ಅಂದಾಜು ಪಟ್ಟಿ |
|---|---|---|---|---|
| 1 | ಕಾಯಂ ಸಿಬ್ಬಂದಿ ವೇತನ & ಭವಿಷ್ಯನಿಧಿ | 59.00 | 58.72 | 64.00 |
| 2 | ಗುತ್ತಿಗೆ ಸಿಬ್ಬಂದಿ ವೇತನ | 6.25 | 6.40 | 7.00 |
| 3 | ಮುದ್ರಣ ಮತ್ತು ಲೇಖನ ಸಾಮಗ್ರಿ | 2.00 | 1.71 | 2.00 |
| 4 | ಪೀಠೋಪಕರಣ | 4.00 | 9.84 | 1.00 |
| 5 | ವಿದ್ಯುತ್. | 1.50 | 1.28 | 1.50 |

Created with cam scan

Sri Jayacham... Cr. Co-op. Society Ltd. * Bangalore-32

| | | | | |
|---|---|---|---|---|
| 6 | ವಿದ್ಯುತ್ ಯಂತ್ರಗಳ ವಾರ್ಷಿಕ ನಿರ್ವಹಣಾ ವೆಚ್ಚ | 3.00 | 1.95 | 3.00 |
| 7 | ವಾರ್ಷಿಕ ಮಹಾಸಭೆ ಖರ್ಚು | 5.50 | 4.66 | 7.00 |
| 8 | ಸಾದಿಲ್ವಾರು | 3.00 | 2.99 | 4.00 |
| 9 | ಪ್ರಯಾಣ ಭತ್ಯೆ | 1.00 | 0.32 | 1.00 |
| 10 | ಜಾಹೀರಾತು | 3.00 | 1.56 | 3.00 |
| 11 | ನಿರ್ದೇಶಕರ ಸಭಾ ಭತ್ಯೆ | 4.25 | 3.46 | 5.00 |
| 12 | ಇತರೆ | 2.50 | 1.51 | 2.50 |
| 13 | ಕಟ್ಟಡ ನಿರ್ವಹಣಾ ವೆಚ್ಚ & ತೆರಿಗೆ. | 4.00 | 4.04 | 5.00 |
| 14 | ಕಾನೂನು ಶುಲ್ಕ | 2.00 | 0.50 | 2.00 |
| 15 | ವಸೂಲಾತಿ ವೆಚ್ಚ | 3.00 | 0.83 | 2.00 |
| 16 | ವಾಹನ ನಿರ್ವಹಣೆ | 0.00 | 3.24 | 4.00 |
| 17 | ದೂರವಾಣಿ & ಅಂತರ್ಜಾಲ | 2.50 | 0.81 | 2.00 |
| 18 | ಬಿಬಿ | 4.50 | 3.76 | 5.00 |
| 19 | ತೆರಿಗೆ ಲೆಕ್ಕ ಪರಿಶೋಧನೆ & ಅಕೌಂಟ್ಸ್ ಕ್ಲೋಸಿಂಗ್ | 4.00 | 4.00 | 4.00 |
| 20 | 2023-28ನೇ ಸಾಲಿನ ಚುನಾವಣಾ ವೆಚ್ಚ | 6.00 | 6.30 | 0.00 |
| | ಒಟ್ಟು | 121.00 | 117.88 | 125.00 |

Created with cam scan

ಕ್ರಮ ಸಂಖ್ಯೆ -4 ಪೀಠೋಪಕರಣಗಳ ಬಾಬ್ತಿನಲ್ಲಿ ಬಂದಿದ್ದ ಹೆಚ್ಚುವರಿ ಖರ್ಚು ರೂ 5,84,000/-ಗಳನ್ನು ಸುಲ್ತಾನ್ ಪಾಳ್ಯ ರಾಜ ಸ್ವಂತ ಕಟ್ಟಡದ ಕಛೇರಿ ಮತ್ತು ವಾಸದ ಮನೆಗಳಿಗೆ ಅಗತ್ಯವಿದ್ದ ಪೀಠೋಪಕರಣಗಳನ್ನು ಅಳವಡಿಸುವಲ್ಲಿ. ಕಾ.ಸ.ಮಂ. ಸಭೆಯಲ್ಲಿ ಅನುಮೋದನೆ ಪಡೆದು ಆದ ಖರ್ಚುಗಳಾಗಿದ್ದು. ಸದರಿ ಹೆಚ್ಚುವರಿ ಖರ್ಚುಗಳಿಗೆ ಪೂರ್ವಾನ್ವಯ ಒಪ್ಪಿಗೆ ನೀಡಿ, ಅನುಮೋದನೆ ನೀಡುವಂತೆ ಮಹಾಸಭೆಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಕೋರಿದರು. ಸದಸ್ಯರು ಕೈ-ಎತ್ತುವ ಮೂಲಕ ಅನುಮೋದನೆಯನ್ನು ನೀಡಿದರು.

## 8. 2024-25ನೇ ಸಾಲಿಗೆ ಲೆಕ್ಕ-ಪರಿಶೋಧಕರ ನೇಮಕಾತಿ ಮತ್ತು ಅನುಮೋದನೆ:

ಸಹಕಾರ ಸಂಘಗಳ ಕಾಯ್ದೆ 63(1) ರನ್ವಯ 2024-25 ಸಾಲಿಗೆ ಸಂಘದ ಲೆಕ್ಕ-ಪರಿಶೋಧಕರ ನೇಮಕಾತಿಗಾಗಿ, ವಾರ್ಷಿಕ ವರದಿ ಪುಟ ಸಂಖ್ಯೆ 11 ರಲ್ಲಿ ವಿವರಗಳನ್ನು ಮಹಾಸಭೆಯಲ್ಲಿ ಮಂಡಿಸಿ, ಅದರಂತೆ ಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ಅಧಿಕೃತವಾಗಿ 'ಎ' ವರ್ಗದಲ್ಲಿ ನೋಂದಣಿ ಸಂಖ್ಯೆ ಸಿ-05/03/2013 ಕ್ರಮ ಸಂಖ್ಯೆ -529 ರಡಿ ನೋಂದಣಿಯಾಗಿರುವ

ಮೆ|| ಸಿ. ಎಸ್. ರಾಜು ಅಂಡ್ ಕೋ.
ಚಾರ್ಟರ್ಡ್ ಅಕೌಂಟಂಟ್
ನಂ. 592, 2ನೇ ಮಹಡಿ, ರಜ್ಜದಹಳ್ಳಿ ಮನೆ
10ನೇ 'ಎ' ಮುಖ್ಯರಸ್ತೆ, 5ನೇ ಬ್ಲಾಕ್,
ಜಯನಗರ ಬೆಂಗಳೂರು -560041 ರವರನ್ನು

ನೇಮಕ ಮಾಡಿಕೊಳ್ಳಲು ಹಾಗೂ ಇವರಿಗೆ ನೀಡಬೇಕಾದ ಸಂಭಾವನೆ ಬಗ್ಗೆ, ಆಡಳಿತ ಮಂಡಳಿಗೆ ಅಧಿಕಾರ ನೀಡಲು ಕೋರಿದರು. ಮು.ಕಾ.ನಿ. ರವರ ಕೋರಿಕೆಯನ್ನು ಸಭೆಯು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.

Created with cam scan

Sri Jayachamaraja Cr. Co-op. Society Ltd. Bangalore-32



## 9. ಸಂಘದ ಬೈಲಾಗಳ ತಿದ್ದುಪಡಿಗಳ ಮಂಡನೆ ಮತ್ತು ಅನುಮೋದನೆ

ಪ್ರಸ್ತುತ ಸಂಘದಲ್ಲಿ ಜಾರಿಯಲ್ಲಿರುವ ಬೈಲಾಗಳಲ್ಲಿನ ಈ ಕೆಳಕಂಡ ಪ್ರಸ್ತಾವಿತ ತಿದ್ದುಪಡಿಗಳ ವಿವರಗಳನ್ನು 2023-24 ಸಾಲಿನ 50ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಸೂಚನಾಪತ್ರದ ಜೊತೆಯಲ್ಲಿ ಪುಟಸಂಖ್ಯೆ 2-3 ರವರೆಗೆ ವಿವರವಾಗಿ ಲಗತ್ತಿಸಿದೆ. ಮಾನ್ಯ ಸದಸ್ಯರುಗಳಿಗೆ ಅಂಚೆ ಮುಖಾಂತರ ರವಾನಿಸಲಾಗಿತ್ತು.

ಇದಕ್ಕೆ ಸಂಬಂಧಪಟ್ಟಂತೆ ಸಂಘದ ಪ್ರಸ್ತಾವಿತ ತಿದ್ದುಪಡಿಗಳನ್ನು ಮು.ಕಾ.ನಿ.ಯವರು ಮಹಾಸಭೆಯಲ್ಲಿ ಮಂಡಿಸಿದರು. ಸದರಿ ತಿದ್ದುಪಡಿಗಳನ್ನು ಮಹಾಸಭೆಯು ಪರಿಶೀಲಿಸಿ, ಚರ್ಚಿಸಿದ ನಂತರ ಸರ್ವಾನುಮತದಿಂದ ಅನುಮೋದನೆ ನೀಡಿತು.

| ಕ್ರ. ಸಂ. | ವಿವರಗಳು | ಬೈಲಾ ಕ್ರಮಸಂಖ್ಯೆ ಪ್ಯಾರಾ ಸಂಖ್ಯೆ | ಬೈಲಾ ತಿದ್ದುಪಡಿಗಳು. |
|---|---|---|---|
| 1. | ಅಧಿಕೃತ ಷೇರು ಬಂಡವಾಳ | 23(ಅ) | ಅಧಿಕೃತ ಷೇರು ಬಂಡವಾಳ ಮಿತಿಯನ್ನು ರೂ 3 ಕೋಟಿ ಯಿಂದ 4 ಕೋಟಿಗೆ ಪರಿಷ್ಕರಣೆ. |
| 2. | ಕಟ್ಟಡ ನಿಧಿ | 76(4)(ii) | ನಿವ್ವಳಲಾಭ ವಿಲೇವಾರಿಯಲ್ಲಿದ್ದ ಕಟ್ಟಡ ನಿಧಿ ಮಿತಿ ಶೇ 20 ಇರುವುದನ್ನು ಶೇ 35 ಕ್ಕೆ ಮೀರದಂತೆ ಎಂದು ಪರಿಷ್ಕರಣೆ |
| 3. | ಸುವರ್ಣ ಮಹೋತ್ಸವ ನಿಧಿ | 76(4)(iii) | ನಿವ್ವಳಲಾಭ ವಿಲೇವಾರಿಯಲ್ಲಿ ಸುವರ್ಣ ಮಹೋತ್ಸವ ನಿಧಿ ಮಿತಿ ಶೇ 10 ಇರುವುದನ್ನು ಶೇ 25 ಕ್ಕೆ ಮೀರದಂತೆ ಎಂದು ಪರಿಷ್ಕರಣೆ. |
| 4 | ಕರಡು ಸಾಲದ ನಿಧಿ | 76(4)(i) | ನಿವ್ವಳಲಾಭ ವಿಲೇವಾರಿಯಲ್ಲಿ ಕರಡು ಸಾಲದ ನಿಧಿ ಮಿತಿ ಶೇ 10 ಇರುವುದನ್ನು ಶೇ 25 ಕ್ಕೆ ಮೀರದಂತೆ ಎಂದು ಪರಿಷ್ಕರಣೆ. |

Created with cam scan

| | | | |
|---|---|---|---|
| 5. | ಲಾಭಾಂಶ ಸಮತೋಲನ ನಿಧಿ | 76(4)(vii) | ನಿವ್ವಳ ಲಾಭ ವಿಲೇವಾರಿ ಯಲ್ಲಿ ಲಾಭಾಂಶ ಸಮತೋಲನ ನಿಧಿ ಮಿತಿ ಶೇ.2 ಇದ್ದು ಶೇ.5 ಕ್ಕೆ ಏರಿಸಿದಂತೆ ಎಂದು ಪರಿಷ್ಕರಣೆ. |
| 6. | ಸದಸ್ಯರ/ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 76(4)(viii) | ಹೊಸ ಸೇರ್ಪಡೆ ಶೇ.10 ಕ್ಕೆ ಏರಿಸಿದಂತೆ. |

## 10. ಸದಸ್ಯರ ಸಲಹೆ ಸೂಚನೆಗಳ ಮೇಲೆ ಚರ್ಚೆ ಮತ್ತು ತೀರ್ಮಾನ

1) ಸದಸ್ಯರಾದ ಶ್ರೀ. ವೆಂಕಟೇಶ್ ಸಂ.ಸಂ. 1310 ರವರು ವಾರ್ಷಿಕ ಮಹಾಸಭೆಯು ಈ ದಿನ ಕಲ್ಪಿಸಿರುವ ಉಪಾಹಾರದ ವ್ಯವಸ್ಥೆಯನ್ನು ಶ್ಲಾಘಿಸಿದರು. ಊಟದ ಸ್ಥಳ ಮತ್ತು ಮಹಾಸಭೆಯನ್ನು ನಡೆಸಲು ಉದ್ದೇಶಿಸಿರುವ ಸ್ಥಳಾವಕಾಶ ಚಿಕ್ಕದಾಗಿದ್ದು, ಸದಸ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಹಾಜರಾಗಲು ಅನಾನುಕೂಲವಾಗುತ್ತದೆ. ಆದ್ದರಿಂದ ಮುಂದಿನ ಸಾಲುಗಳ ಮಹಾಸಭೆಯನ್ನು ವಿಶಾಲವಾದ ಸ್ಥಳಾವಕಾಶವಿರುವ ಜಾಗದಲ್ಲಿ ಏರ್ಪಡಿಸ ಬೇಕೆಂದು ಮನವಿ ಮಾಡಿದರು.

ಇದೇ ಸದಸ್ಯರು ಸಂಘವು ಸದಸ್ಯರ/ಸಿಬ್ಬಂದಿ ಮಕ್ಕಳ ಪ್ರತಿಭಾ ಪುರಸ್ಕಾರ ನೀಡುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಈ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಭೆಯ ಕಾರ್ಯಸೂಚಿಗಳಲ್ಲಿ ಕ್ರಮ ಸಂಖ್ಯೆ – 14 ರಲ್ಲಿ ನಡೆಸುತ್ತಿದ್ದು, ವಿದ್ಯಾರ್ಥಿ/ನಿ ಯವರು ಸಭೆ ಮುಕ್ತಾಯದ ವರೆಗೆ ಕಾಯುತ್ತಿರಬೇಕಾಗಿದ್ದು, ಇದನ್ನು ಅಧ್ಯಕ್ಷರ ಸ್ವಾಗತ ಭಾಷಣದ ನಂತರವೇ ಕೈಗೊಂಡು ನೆರವೇರಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದೆಂದು ತಿಳಿಸಿದರು. ಮತ್ತೆ ಮರಣ ಪರಿಹಾರ ನಿಧಿ ಮೊತ್ತ ಈಗ ನೀಡುತ್ತಿರುವ ರೂ 15,000/- ಗಳನ್ನು ಪರಿಷ್ಕರಿಸಿ ರೂ 20,000/- ಗಳಿಗೆ ಹೆಚ್ಚಿಸಬೇಕೆಂದು ಸಹ ಕೋರಿದರು.

ಇದಕ್ಕೆ ಕಾ.ನಿ. ಮಂಡಳಿ ಸದಸ್ಯರಾದ ಶ್ರೀ. ಮುನಿನಾಗಲು.ಸಿ. ರವರು ಮಾತನಾಡಿ ಶ್ರೀ. ವೆಂಕಟೇಶ್ ರವರು ನೀಡಿರುವ ಸಲಹೆಗಳು

Created with cam scan

Sri Jayachamaraja Cr. Co-op. Society Ltd. Bangalore-32

ಒಳ್ಳೆಯ ಸಲಹೆಗಳಾಗಿದ್ದು, ಇವುಗಳನ್ನು ಮುಂದಿನ ಹಂತಗಳಲ್ಲಿ ಜಾರಿಗೊಳಿಸಲು ಕಾ.ನಿ. ಮಂಡಳಿ ಸಭೆಯಲ್ಲಿ ಚರ್ಚಿಸಿ, ಸಕಾರಾತ್ಮಕವಾಗಿ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದೆಂದು ತಿಳಿಸಿದರು.

2) ಸದಸ್ಯರಾದ ಶ್ರೀ. ಕೆ. ಎಲ್. ನಾಗಭೂಷಣ್. ಸ.ಸಂ. 1318 ರವರು ಮಾತನಾಡಿ ಹಾಲಿ ಇರುವ ಕಾ.ನಿ. ಮಂಡಳಿಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಂಸ್ಥಾಪಕರಾದ ಶ್ರೀ. ಬಿ.ಕೆ. ರಾಮು ರವರ ಧ್ಯೇಯೋದ್ದೇಶಗಳನ್ನು ತಿಳಿಸಿದರು. ಹಾಗು ಸಂಸ್ಥೆಯು 50 ವರ್ಷಗಳನ್ನು ಪೂರೈಸಿ, ಸುವರ್ಣ ಮಹೋತ್ಸವ ವರ್ಷಕ್ಕೆ ಕಾಲಿಟ್ಟಿರುವುದನ್ನು ನೆನೆದು ಹರ್ಷ ವ್ಯಕ್ತಪಡಿಸುತ್ತಾ, ಈ ಸಂಭ್ರಮಾಚರಣೆಯನ್ನು ಅದ್ದೂರಿಯಾಗಿ ಬಹಳ ಕಾಲದವರೆಗೆ ನೆನಪಿಟ್ಟುಕೊಳ್ಳುವ ಹಾಗೆ ಆಚರಿಸಿ, ಸದಸ್ಯರುಗಳಿಗೆ, ಸಿಬ್ಬಂದಿಯವರಿಗೆ ನೆನಪಿನ ಉಡುಗೊರೆಯನ್ನು ನೀಡಿ ಆಚರಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗು ಸಿಬ್ಬಂದಿ ವರ್ಗದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅವರು ನಿರ್ವಹಿಸುತ್ತಿರುವ ಕಾರ್ಯವೈಖರಿಯನ್ನು ಹಾಗು ವ್ಯವಹಾರದ ಸಂದರ್ಭದಲ್ಲಿ ನೀಡುವ ಸಹಕಾರದ ಬಗ್ಗೆಯೂ ಮತ್ತು ಈ ಸಾಲಿಗೆ ಸಂಘವು 'ಎ' ದರ್ಜೆ ಪಡೆದಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದಕ್ಕೆ ಕಾ.ನಿ. ಮಂಡಲಿ ಸದಸ್ಯರಾದ ಶ್ರೀ. ಮುನಿನಾಗಲು. ಎಸ್. ರವರು ಸುವರ್ಣ ಮಹೋತ್ಸವ ಆಚರಣೆಗೆ ಈಗಾಗಲೇ ಸಂಘವು ಗಳಿಸಿದ ನಿವ್ವಳಲಾಭದಿಂದ ಕಳೆದ 8-10 ವರ್ಷಗಳಿಂದ ನಿಧಿ ಕ್ರೋಢೀಕರಣ ಮಾಡುತ್ತಿದ್ದು, ಸಾಲಿನಂತ್ಯಕ್ಕೆ ರೂ. 66,70,676/- ಗಳು ಸಂಗ್ರಹವಾಗಿದ್ದು. ಸದರಿ ಸಾಲಿನ ನಿವ್ವಳಲಾಭ ವಿಲೇವಾರಿಯಿಂದ ರೂ. 6,95,419/- ಗಳು ಸೇರಿ ರೂ. 73,66,095/- ಗಳಾಗುತ್ತದೆ ಮತ್ತು ಮುಂದಿನ ಸಾಲಿನಲ್ಲಿ ಸಂಘವು ಗಳಿಸಬಹುದಾದ ನಿವ್ವಳಲಾಭ ವಿಲೇವಾರಿಯಲ್ಲಿ ಶೇ.25 ಕ್ಕೆ ಮೀರದಂತೆ ಸಂಗ್ರಹಣೆಗೆ ಅವಕಾಶ ಕಲ್ಪಿಸಿದೆ ಆದ್ದರಿಂದ ಸುವರ್ಣ ಮಹೋತ್ಸವ ಆಚರಣೆಯನ್ನು ಅದ್ದೂರಿಯಾಗಿ ಆಚರಿಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸದಸ್ಯರು ಮುಂದುವರೆದು, ಸಂಘವು ಪ್ರಸಕ್ತ ಸಾಲಿನಲ್ಲಿ ನೀಡಲು ಉದ್ದೇಶಿಸಿರುವ ಷೇರು ಲಾಭಾಂಶ ಶೇ.22 ರಲ್ಲಿ ಶೇ.10 ನ್ನು ಸುವರ್ಣ ಮಹೋತ್ಸವ ನಿಧಿಗೆ ಸದಸ್ಯರುಗಳು ನೀಡಿದರೆ ಒಳ್ಳೆಯದು ಎಂದು ಅಭಿಪ್ರಾಯ ಪಟ್ಟರು. ಇದಕ್ಕೆ ಮತ್ತೊಬ್ಬ ಸದಸ್ಯರಾದ ಶ್ರೀ. ವೆಂಕಟೇಶ್ 1310 ರವರು ಈ ಪ್ರಸ್ತಾವನೆಯನ್ನು ತಿರಸ್ಕರಿಸಿದರು. ಸಭೆಯು ಸಹ ಸಕಾರಾತ್ಮಕ ಅಭಿಪ್ರಾಯ ತೆಗೆದುಕೊಳ್ಳಲಿಲ್ಲ.

Created with cam scan

3) ಸದಸ್ಯರಾದ ಶ್ರೀಮತಿ. ಶಿಲ್ಪಾ ದೇವಾನಂದ್ 11707 ರವರು ಸುವರ್ಣ ಮಹೋತ್ಸವ ಸಮಾರಂಭ ಆಚರಣೆಗೆ ಸಂಘದ ಯುವ ಸದಸ್ಯರನ್ನು ಸಹ. ಆ.ಮ. ಮಂಡಳಿ ಸದಸ್ಯರನ್ನೊಳಗೊಂಡ ಉಪಸಮಿತಿಯಲ್ಲಿ ಸೇರಿಸಿಕೊಂಡು ಆಚರಿಸಿದರೆ ಒಳ್ಳೆಯದು ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಸದಸ್ಯರುಗಳು ತಮ್ಮ ಸಾಲದ ಕಂತು ಹಾಗೂ ಇತರೆ ವ್ಯವಹಾರಗಳನ್ನು ನಿರ್ವಹಿಸಲು ಡಿಜಿಟಲ್ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಕೋರಿದರು.

ಇದಕ್ಕೆ ಮು.ಕಾ.ನಿ. ರವರು ಈಗಾಗಲೇ ಸಂಘವು ಐ.ಡಿ.ಬಿ.ಐ. ಬ್ಯಾಂಕ್ ಮತ್ತು ಆಕ್ಸಿಸ್ ಬ್ಯಾಂಕ್ ಸಹಭಾಗಿತ್ವದಲ್ಲಿ ಡಿಜಿಟಲ್ ಪಾವತಿಗಳಾದ ಗೂಗಲ್ ಪೇ ಫೋನ್ ಪೇ ಗಳ ಮುಖಾಂತರ NEFT/RTGS ಮುಖಾಂತರ ಸಾಲದ ಮರುಪಾವತಿಗೆ ಕ್ರಮ ತೆಗೆದುಕೊಳ್ಳಲಾಗಿದೆ. ಸದಸ್ಯರು ಈ ಪ್ರಯೋಜನವನ್ನು ಈಗಾಗಲೇ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

4) ಸದಸ್ಯರಾದ ಶ್ರೀ. ವೆಂಕಟೇಶ್ ಮೂರ್ತಿ ಜಂ.ಸಂ. 784 ರವರು ಸುವರ್ಣ ಮಹೋತ್ಸವ ಆಚರಣೆಗೆ ಎಷ್ಟು ಮೊತ್ತವನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ? ವಿವರಣೆಯನ್ನು ಕೇಳಿದರು.

ಆ.ಮ. ಮಂಡಳಿ ಸದಸ್ಯರಾದ ಶ್ರೀ. ಮುನಿನಾಗಲು. ಎಸ್. ರವರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಬಗ್ಗೆ ವಿವರವಾಗಿ ಹೇಳಲಿದ್ದಾರೆ ಎಂದು ತಿಳಿಸಿದರು.

5) ಸದಸ್ಯರಾದ ಶ್ರೀ. ನಾಗರಾಜು. ಜಂ.ಸಂ. 2431 ರವರು ಮೃತಾಧೀನರಾದ ಸದಸ್ಯರುಗಳ ಪಟ್ಟಿಯಲ್ಲಿ ಜೂನ್ - ಜುಲೈ 24ರ ಮಾಹೆಯಲ್ಲಿ ಸಂಘದ ಸದಸ್ಯರಾಗಿದ್ದ, ನನ್ನ ಸ್ನೇಹಿತರೂ ಆಗಿದ್ದ ಇಬ್ಬರು ಸದಸ್ಯರು ನಿಧನರಾಗಿದ್ದರೂ ಅವರ ಹೆಸರುಗಳನ್ನು ಉಲ್ಲೇಖಿಸಿಲ್ಲ ಎಂದು ಕೇಳಿದರು.

ಇದಕ್ಕೆ ಶ್ರೀ. ಮುನಿನಾಗಲು. ಎಸ್. ರವರು ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿರುವ 29 ಹೆಸರುಗಳು ಸದರಿ ಸಾಲಾಂತ್ಯಕ್ಕೆ ಅಂದರೆ 31/3/2024 ಅಂತ್ಯಕ್ಕೆ ಇದ್ದು, ನಂತರ ಸಾವಿಗೀಡಾದ ಹೆಸರುಗಳು ಮುಂದಿನ ಸಾಲಿನ ವರದಿಯಲ್ಲಿ ಪ್ರಕಟವಾಗಲಿದೆ. ಎಂದು ತಿಳಿಸಿದರು. ಮತ್ತು ಮರಣ ಪರಿಹಾರ ನಿಧಿಯ ಮೊತ್ತವನ್ನು ಸದಸ್ಯರ ನಾಮಿನಿಯವರು ಮರಣ ಪ್ರಮಾಣ ಪತ್ರ ಸಲ್ಲಿಸಿದ ಕೂಡಲೇ ಪಾವತಿಸಲಾಗುತ್ತಿದೆ ಎಂದರು.

Created with cam scan

Sri Jayachamaraja Cr. Co-op. Society Ltd. Bangalore 32



6) ಸದಸ್ಯರಾದ ಶ್ರೀ. ಯತಿರಾಜ್. ಜಂ.ಕ್ರ.1243 ರವರು ಸಂಘವು 50 ವರ್ಷ ಪೂರೈಸಿರುವುದಕ್ಕೆ ಸಂತಸ ವ್ಯಕ್ತಪಡಿಸಿ, ಮುಂದೆ 100 ವರ್ಷಗಳು ಸಹ ಪೂರೈಸಲಿ ಎಂದು ಹಾರೈಸಿದರು. ಬೈಲಾ ತಿದ್ದುಪಡಿಯಲ್ಲಿ ಉಲ್ಲೇಖಿಸಿರುವ ಶೇಕಡಾವಾರು ಒಟ್ಟು 100 ಪ್ರತಿಶತ ಆಗುತ್ತಿದ್ದು ಸಂಪೂರ್ಣ ಲಾಭವನ್ನು ಉಲ್ಲೇಖಿಸಿರುವ ಬೈಲಾ ತಿದ್ದುಪಡಿಗೆ ವಿನಿಯೋಗಿಸುತ್ತೀರಾ? ಎಂದು ವಿವರಣೆ ಕೇಳಿದರು.

ಇದಕ್ಕೆ ಶ್ರೀ. ಮುನಿನಾಗಲು. ಎಸ್. ರವರು ನಿಯಮಗಳಂತೆ ಇಲಾಖೆ ಕ್ರಮಬದ್ಧ ಲಾಭವಿಲೇವಾರಿ ಮಾಡಲಾಗುವುದು. ತಿದ್ದುಪಡಿಗಳಲ್ಲಿ ಉಲ್ಲೇಖಿಸಿರುವ ಶೇಕಡಾವಾರು 100 ಪ್ರತಿಶತ ಇರುವುದಿಲ್ಲ ಎಂದು ತಿಳಿಸಿದರು. ಸದಸ್ಯರು ಒಪ್ಪಿಗೆ ಸೂಚಿಸಿದರು.

7) ಸದಸ್ಯರಾದ ಶ್ರೀ. ಯತಿರಾಜ್. ರವರ ನಂತರ ಶ್ರೀ. ಕೆ. ಸಿ. ರಾಮಯ್ಯ ರವರು, ಸಂಘದಲ್ಲಿ ನೂತನವಾಗಿ ಪ್ರಾರಂಭಿಸಿರುವ ಕಟ್ಟಡ/ಮನೆ ಖರೀದಿ ಸಾಲದ ಬಗ್ಗೆ ವಿವರಣೆ ಕೇಳಿದರು.

ಇದಕ್ಕೆ ಮು.ಕಾ.ನಿ. ಯವರು, ಸಂಘವು 50 ವರ್ಷ ಪೂರೈಸಿರುವ ಸಂದರ್ಭದಲ್ಲಿ ದಿನಾಂಕ: 15.07.2024 ರಿಂದ ಹೊಸ ಸಾಲದ ಯೋಜನೆ ಜಾರಿಗೆ ತಂದಿದ್ದು ಮನೆ/ಕಟ್ಟಡ ಖರೀದಿಸಲು ನಿಯಮಗಳನ್ವಯ ವಾರ್ಷಿಕ ಶೇ.12.50 ಬಡ್ಡಿ ದರದಲ್ಲಿ ಗರಿಷ್ಠ ರೂ 50 ಲಕ್ಷಗಳ ಸಾಲವನ್ನು ಮಂಜೂರು ಮಾಡಲಾಗುವುದು ಎಂದು ತಿಳಿಸಿದರು ಹಾಗೂ ಇದರ ಜೊತೆಯಲ್ಲಿ ಸದಸ್ಯರು/ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯನ್ನು ಸಹ ಪ್ರಾರಂಭಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಲು ತಿಳಿಸಿದರು.

## 11 ಅಧ್ಯಕ್ಷರ ಭಾಷಣ ಮತ್ತು ಪ್ರಾಸ್ತಾವಿಕ ನುಡಿ:

ಆತ್ಮೀಯ ಸಹಕಾರ ಬಂಧುಗಳೇ, ವೇದಿಕೆ ಮೇಲೆ ಉಪಸ್ಥಿತರಿರುವ ಉಪಾಧ್ಯಕ್ಷರೇ, ಆ.ಸ. ಮಂಡಳಿಯ ನನ್ನ ಸಹೋದ್ಯೋಗಿ ನಿರ್ದೇಶಕರೇ ಸಿಬ್ಬಂದಿ ವರ್ಗದವರೇ, ಠೇವಣಿದಾರರುಗಳೇ, ತಮ್ಮೆಲ್ಲರಿಗೂ 50 ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಮತ್ತೊಮ್ಮೆ ಸ್ವಾಗತ ಬಯಸುತ್ತಾ, ಪ್ರಸಕ್ತ ಸಾಲಿನಲ್ಲಿ ತಮ್ಮೆಲ್ಲರ ಸಹಕಾರದಿಂದ ಸೊಸೈಟಿಯು ಉತ್ತಮ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ ಎಂದರೆ ತಪ್ಪಾಗಲಾರದು.

ಸೊಸೈಟಿ ದುಡಿಯುವ ಬಂಡವಾಳ ಠೇವಣಿಗಳ ಬಗ್ಗೆ ಮತ್ತು ಲಾಭಾಂಶದ ಬಗ್ಗೆ ಸಿ.ಇ.ಓ. ರವರು ಸಭೆಗೆ ವಿವರವಾಗಿ ಅಂಕಿ-ಅಂಶಗಳ ಬಗ್ಗೆ ಮಾಹಿತಿ ನೀಡಿರುತ್ತಾರೆ. ಸೊಸೈಟಿ ಅಭಿವೃದ್ಧಿಗೆ

Created with cam scan

Sri Jayachamaraja Cr. Co-op. Society Ltd. Bangalore 37

ತಮ್ಮೆಲ್ಲರ ಸಹಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವುಗಳು ಆಯ್ಕೆ ಮಾಡಿರುವ ನೂತನ ಆಡಳಿತ ಮಂಡಳಿಯು ಸದಸ್ಯರು ಸೊಸೈಟಿಯ ಅಭಿವೃದ್ಧಿ ಮತ್ತು ಸದಸ್ಯರ ಅನುಕೂಲಕ್ಕಾಗಿ ಕೆಳಕಂಡ ವಿಷಯಗಳನ್ನು ಚರ್ಚೆ ಮಾಡಿ ಕ್ರಮ ತೆಗೆದುಕೊಂಡಿರುತ್ತೇವೆ.

1) ಸುಲ್ತಾನ್ ಪಾಳ್ಯ ಶಾಖೆಯು ಸ್ವಂತ ಕಟ್ಟಡಕ್ಕೆ ಆಗಿದ್ದ ನಿಧಿಯಿಂದ ಪಡೆದ ಸಾಲದ ಮೊತ್ತ ರೂ 8318,255/- ಗಳಲ್ಲಿ ರೂ.64,50,205/- ಗಳನ್ನು ಮರುಪಾವತಿ ಮಾಡಿದ್ದು, ಉಳಿದ ಸಾಲದ ಮೊತ್ತ ರೂ 18,68,050/- ಗಳನ್ನು ಮುಂಬರುವ ವರ್ಷಗಳಲ್ಲಿ ಮರುಪಾವತಿ ಮಾಡುತ್ತೇವೆ.

2) ಸದಸ್ಯರು ಹಾಗೂ ಸಿಬ್ಬಂದಿಯವರಿಗೆ ದಿ:15.07.2024 ರಿಂದ ಜಾರಿಗೆ ಬರುವಂತೆ ಕ್ಷೇಮಾಭಿವೃದ್ಧಿ ನಿಧಿಯನ್ನು ಪ್ರಾರಂಭಿಸಿದ್ದು, ಈ ನಿಧಿಗೆ ರೂ 20,00,000/- ಗಳನ್ನು ಈ ನಿಧಿಯಲ್ಲಿ ಕಾದಿರಿಸಲಾಗಿದೆ.

3) ದಿನಾಂಕ: 15.08.2023 ರಿಂದ ಜಾರಿಗೆ ಬರುವಂತೆ ಎಲ್ಲಾ ಸಾಲಗಳ ಮೇಲೆ ಬಡ್ಡಿಯನ್ನು ಮತ್ತು ಠೇವಣಿಗಳ ಮೇಲಿನ ಬಡ್ಡಿಯನ್ನು ಪರಿಷ್ಕರಿಸಿ ಸದಸ್ಯರು ಮತ್ತು ಠೇವಣಿದಾರರಿಗೆ ಅನುಕೂಲ ಮಾಡಿರುತ್ತೇವೆ.

4) ಸದಸ್ಯರ ಮರಣ ಪರಿಹಾರ ಮೊತ್ತವನ್ನು ದಿ: 2.08.2023 ರಿಂದ ಜಾರಿಗೆ ಬರುವಂತೆ ರೂ 12,000/- ಗಳಿಂದ ರೂ 15,000/- ಗಳಿಗೆ ಹೆಚ್ಚಿಗೆ ಮಾಡಿರುತ್ತೇವೆ.

5) ದಿನಾಂಕ: 01-11-2023 ರಿಂದ ಜಾರಿಗೆ ಬರುವಂತೆ ಒಟ್ಟು 341 ಜನ ಸದಸ್ಯರಿಗೆ ಆ-ಜೀವ ಸದಸ್ಯತ್ವವನ್ನು ನೀಡಿರುತ್ತೇವೆ.

6) ದಿನಾಂಕ: 01.04.2024 ರಿಂದ ಜಾರಿಗೆ ಬರುವಂತೆ ಖಾಯಂ ಸಿಬ್ಬಂದಿಗಳಿಗೆ ನೂತನ ವೇತನ ಶ್ರೇಣಿ ನೀಡಿರುತ್ತೇವೆ.

7) ದಿನಾಂಕ: 15.07.2024 ರಿಂದ ಜಾರಿಗೆ ಬರುವಂತೆ ಸದಸ್ಯರು ಅನುಕೂಲಕ್ಕಾಗಿ ಸ್ವಂತ ಮನೆ ಹೊಂದಲು, ಮನೆ ಖರೀದಿ ಸಾಲ ರೂ 50 ಲಕ್ಷಗಳವರೆಗೆ ಸಾಲ ನೀಡಲು ಕ್ರಮ ತೆಗೆದುಕೊಂಡು ಜಾರಿ ಮಾಡಿರುತ್ತೇವೆ.

Created with cam scan

8) ಸುವರ್ಣ ಮಹೋತ್ಸವವನ್ನು ಮುಂಬರುವ ವರ್ಷಗಳಲ್ಲಿ ನಡೆಸಲು ನಿಧಿಗೆ ಇರುವ ರೂ 36,70,676/- ಗಳ ಜೊತೆಗೆ ಈ ವರ್ಷ ರೂ 30,00,000/- ಗಳನ್ನು ಕಾದಿರಿಸಿ, ಈಗ ಒಟ್ಟು ನಿಧಿಯಾದ ರೂ 66,70,676/- ಆಗುತ್ತದೆ. ಎಂದು ತಿಳಿಸಲು ಹರ್ಷ ಪಡುತ್ತೇನೆ.

9) ಸದಸ್ಯರ/ಸಿಬ್ಬಂದಿಯ ಮಕ್ಕಳಿಗೆ ನೀಡುತ್ತಿರುವ ಪ್ರತಿಭಾ ಪುರಸ್ಕಾರದ ಮೊತ್ತವನ್ನು ರೂ 2000/- ಗಳಿಂದ ರೂ 2500/- ಗಳನ್ನು ನೀಡಲು ತಕ್ಷಣದಿಂದ ಜಾರಿಗೆ ತಂದಿರುತ್ತೇವೆ.

10) ಆದಾಯತೆರಿಗೆ ಬಾಬ್ತು 2017-18ನೇ ಸಾಲಿಗೆ ಈಗಾಗಲೇ ರೂ 18,00,000/- ಗಳನ್ನು ಕಾದಿರಿಸಿರುತ್ತೇವೆ. 2015-16ನೇ ಸಾಲಿಗೆ ರೂ 26,57,163/- ಗಳನ್ನು, 2016-17ನೇ ಸಾಲಿಗೆ ರೂ 24,47,942/- ಗಳನ್ನು ನ್ಯಾಯಾಲಯದಲ್ಲಿ ದಾವೆ ಹೂಡಲು ಕಾದಿರಿಸಿರುತ್ತೇವೆ. ಮತ್ತು ಕರಡು ಸಾಲದ ನಿಧಿಯಾಗಿ ರೂ 53,59,861/- ಗಳನ್ನು ಕಾದಿರಿಸಿರುತ್ತೇವೆ.

ಮಾನ್ಯ ಸದಸ್ಯರು 50ನೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ, ಆತ್ಮೀಯರಾಗಿ ಚರ್ಚಿಸಿ, ಸಭೆಯನ್ನು ಯಶಸ್ವಿಗೊಳಿಸಿದ್ದೀರಿ. ಸಭೆಯಲ್ಲಿ ಉಪಸ್ಥಿತರಿರುವ ಎಲ್ಲಾ ಸದಸ್ಯರಿಗೆ, ನಿರ್ದೇಶಕರಿಗೆ, ಸಿಬ್ಬಂದಿವರ್ಗದವರಿಗೆ, ಪಿಗ್ಮಿ ಏಜೆಂಟರುಗಳಿಗೆ ಹಾಗೂ ಸಂಸ್ಥೆಯ ಅಭಿವೃದ್ಧಿಗಾಗಿ ಕಾರಣಕರ್ತರಾದ ಎಲ್ಲಾ ಠೇವಣಿದಾರರಿಗೆ ಧನ್ಯವಾದ ಅರ್ಪಿಸುತ್ತಾ ಮುಂಬರುವ ಗೌರಿ-ಗಣೇಶ ಹಬ್ಬದ ಶುಭಾಶಯಗಳನ್ನು ಕೋರುತ್ತೇನೆ. ಜೈ ಹಿಂದ್, ಜೈ ಕರ್ನಾಟಕ ಮಾತೆ.—

12. ಪ್ರತಿಭಾ ಪುರಸ್ಕಾರ :

2023-24ನೇ ಸಾಲಿನಲ್ಲಿ ಸದಸ್ಯರ/ಸಿಬ್ಬಂದಿಯ ಪ್ರತಿಭಾವಂತ ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣರಾಗಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಿದ್ದ 36 ವಿದ್ಯಾರ್ಥಿಗಳಿಗೆ ತಲಾ ರೂ 2500/- ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಂಸನಾ ಪತ್ರಗಳನ್ನು ನೀಡಿ ಪುರಸ್ಕರಿಸಲಾಯಿತು.

13. ವಂದನಾರ್ಪಣೆ :

ಕೊನೆಯದಾಗಿ ಆಡಳಿತ ಮಂಡಳಿ ಸದಸ್ಯರಾದ

Created with cam scan

ಶ್ರೀ. ವೀರಭದ್ರೇಗೌಡ. ಹೆಚ್. ರವರ ವಂದನಾರ್ಪಣೆಯೊಂದಿಗೆ
ಮಧ್ಯಾಹ್ನ 1.45 ಕ್ಕೆ ಮಹಾಸಭೆಯ ಕಾರ್ಯಕಲಾಪಗಳು
ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾದವು.

ಉಪಾಧ್ಯಕ್ಷರು

ಅಧ್ಯಕ್ಷರು

ಸ್ಥಳ: ಬೆಂಗಳೂರು

ದಿನಾಂಕ: 05.09.2024

Created with cam scan